SN – 024

Ⅲ Sem BBM

(35)

ಮೂರನೇ ಸೆಮಿಸ್ಟರ್ ಬಿ.ಬಿ.ಎಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2014
(Repeaters) (2011-12 Only)
ಕನ್ನಡ ಭಾಷೆ – III
ಸಾಹಿತ್ಯ ಸಲ್ಲಾಪ – 2 ಮತ್ತು ಸಂವಹನ ಕೌಶಲ

Time : 3 Hours | Max. Marks : 90

ST. CLARET COLLEGE LIBRARY

## ಭಾಗ – 1

### ಸಾಹಿತ್ಯ ಪಠ್ಯಗಳು

I. ಪದ್ಯದ ಭಾವಾರ್ಥ ಬರೆಯಿರಿ. (1×5=5)

ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ
ಏಱಿಲ್ಲದ ಗಾಯದಲ್ಲಿ ನೊಂದೆನವ್ವಾ
ಸುಖವಿಲ್ಲದೆ ಧಾವತಿಗೊಂಡೆನವ್ವಾ
ಚನ್ನಮಲ್ಲಿಕಾರ್ಜುನ ದೇವಂಗೊಲಿದು
ಬಾರದ ಭವಂಗಳಲ್ಲಿ ಬಂದೆನವ್ವಾ

II. ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. (3×5=15)

1) ಜಲಗಾರನ ಪೂಜೆಯ ಪರಿಕರಗಳು ಯಾವುವು ?
2) ಜಿರಲೆಗಳಲ್ಲಿ ಎಷ್ಟು ವಿಧಗಳಿವೆ ? ಅವು ಯಾವುವು ?
3) ಡಾಂಭಿಕ ಭಕ್ತಿಯ ಸ್ವರೂಪವನ್ನು ದಾಸಿಮಯ್ಯ ಗುರುತಿಸುವ ಬಗೆ ಹೇಗೆ ?
4) ನಿರೂಪಕನ ಮಗನಿಗೆ ರಂಗೋಲಿ ಕುರಿತು ಹುಟ್ಟಿದ ಪ್ರಶ್ನೆಗಳೇನು ?
5) 'ಕೋಳಿಪಾಲು' ಕತೆಯಲ್ಲಿನ ಕರಡಯ್ಯನ ಪಾತ್ರವನ್ನು ಪರಿಚಯಿಸಿ.

III. ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (3×10=30)

1) 'ಕಾಯಕವೇ ಕೈಲಾಸ' ಎಂಬ ತತ್ವ ಜಲಗಾರ ನಾಟಕದಲ್ಲಿ ಹೇಗೆ ಬಿಂಬಿತವಾಗಿದೆ ?
2) ದೈವ ಸಾಕ್ಷಾತ್ಕಾರಕ್ಕಾಗಿ ಸಿದ್ಧರಾಮ ಹೇಗೆ ಹಂಬಲಿಸುತ್ತಾನೆ ?
3) ರಂಗೋಲಿ ಮತ್ತು ಮಗ ಕವಿತೆಯ ಸ್ವಾರಸ್ಯವನ್ನು ವಿವರಿಸಿ.
4) ಗ್ರಾಮೀಣ ಬದುಕಿನ ಚಿತ್ರಣ 'ಕೋಳಿಪಾಲು' ಕತೆಯಲ್ಲಿ ಹೇಗೆ ಮೂಡಿ ಬಂದಿದೆ ?
5) ಭಾಷೆಯನ್ನು ಕುರಿತ ಕೆ.ವಿ. ನಾರಾಯಣ ಅವರ ವಿಚಾರಗಳೇನು ? ವಿವರಿಸಿ.

## ಭಾಗ – 2

### ಸಂವಹನ ಕೌಶಲ

I. ಇವುಗಳಲ್ಲಿ ನಾಲ್ಕು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. (4×5=20)

1) ಆಂಗಿಕ ಭಾಷೆ

2) ಎಜುಸ್ಯಾಟ್ (EDUSAT)

3) ರೇಡಿಯೋ

4) ಸಂಕೇತ ಭಾಷೆ

5) ವಿಡಿಯೋ ಕಾನ್ಫರೆನ್ಸ್

6) ಕಂಪ್ಯೂಟರ್.

II. ಇವುಗಳಲ್ಲಿ **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (2×10=20)

1) ಸಮೂಹ ಸಂವಹನ ಎಂದರೇನು ? ಸಂವಹನದ ಲಕ್ಷಣಗಳನ್ನು ವಿವರಿಸಿ.

2) ಸಮುದಾಯದ ಮುನ್ನಡೆಗೆ ದೂರದರ್ಶನ ಹೇಗೆ ಸಹಾಯಕವಾಗಿದೆ ? ವಿವರಿಸಿ.

3) ಜಗತ್ತನ್ನು ಕಿರಿದುಗೊಳಿಸಿರುವ ಅಂತರ್ಜಾಲದ ವಿಶೇಷತೆಯನ್ನು ತಿಳಿಸಿರಿ.

4) 'ವಿಷಯ ಪ್ರಸ್ತುತಿ ಕಲೆ' ಎಂದರೇನು ? ವಿವರಿಸಿ.

---